ESI.A.No.26/2019

RW-1,

ದಿನಾಂಕಃ 27-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃಶ್ರೀ. RS ವಕೀಲರಿಂದ

ಅರ್ಜಿದಾರ ಸಂಸ್ಥೆಯು ಇಂಜಿನಿಯರಿಂಗ್ ವರ್ಕ ನಡೆಸುತ್ತಿದೆ ಎಂದರೆ ನಿಜ. ದಿನಾಂಕಃ21-4-2014 ರಂದು ಅರ್ಜಿದಾರರು ಇ ಎಸ್ ಐ ಕೋಡನ್ನು ಪಡೆದಿರುತ್ತಾರೆ. ಅರ್ಜಿದಾರರಿಂದ ನಾವು ಕೇಳಿರುವ ಒಟ್ಟು ಮೊತ್ತ ರೂ.2,08,065-00 ಆಗಿದೆ ಎಂದರೆ ನಿಜ. 2014-15 ರಲ್ಲಿ ಡಿಮೊನಿಟೈಶೇಷನ್ ಆಗಿರುವ ಕಾರಣ ವ್ಯವಹಾರದಲ್ಲಿ ನಷ್ಟವಾಯಿತು ಆದ್ದರಿಂದ ಸರಿಯಾದ ಸಮಯದಲ್ಲಿ ವಂತಿಗೆಯನ್ನು ಪಾವತಿಸಲು ಸಾಧ್ಯವಾಗಲಿಲ್ಲ ಎಂದರೆ ಸಾಕ್ಷಿಯು ಖುದ್ದು ಸುನಾವಣೆಗೆ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಬೇಕಾಗಿತ್ತು ಎಂದು ನುಡಿಯುತ್ತಾರೆ. ಪ್ರಶ್ನಿತ ಆದೇಶವನ್ನು ಅಸ್ಯೂಮ್ಡು ವೇಜಸ್ ಮೇಲೆ ಮಾಡಲಾಗಿರುತ್ತದೆ. ಅದು ಆಕ್ಚುವಲ್ ವೇಜಸ್ ಮೇಲೆ ಅಲ್ಲ. ಅರ್ಜಿದಾರರು ನಾವು ಕ್ಲೇಮು ಮಾಡಿರುವ ಅವಧಿಗೆ ಆಕ್ಚುವಲ್ ವೇಜಸ್ ಮೇಲೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ಆವತ್ತಿಗೆ 45 ಎ ರಡಿಯಲ್ಲಿ ಆದೇಶ ಮಾಡಿ ಆಗಿತ್ತು ಎಂದು ನುಡಿಯುತ್ತಾರೆ. ಅರ್ಜಿದಾರರು ತಡವಾಗಿರುವ ಬಗ್ಗೆ ಬಡ್ಡಿ ಪಾವತಿಸಲು ಮಾತ್ರ ಬದ್ಧರಾಗಿದ್ದಾರೆ ಹೊರತು ನಾವು ಕೇಳಿದ ಮೊತ್ತವನ್ನಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಅರ್ಜಿದಾರರಿಂದ ನಾವು ಕೇಳಿರುವ ಹಣವನ್ನು ಪಾವತಿಸಲು ಅವರು ಬದ್ಧರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.